ಇದು ಹೊಸದಲ್ಲ, ಅದು ತಮಗೂ ಗೊತ್ತಿದೆ. ಅದರಲ್ಲೂ ತಮಗೆ ಗೊತ್ತಿರುವ ಹಾಗೆ ಇದು ಬಹಳ ಅಪಮಾನಕರವಾದ ಘಟನೆ. ಪತ್ರಿಕೆಯಲ್ಲಿ ಬಂದಿರುವಹಾಗೆ ''ಈ ಸೂಳೆಮಗನಿಗೆ ಹೇಸಿಗೆ ಹಚ್ಚಿದ ಚಪ್ಪಲಿ ತಂದು ಬಾಯಿಗೆ ಇಡ್ರೊ ಎಂದಾಗ ಮಲ್ಲಿಕಾರ್ಜುನ ಎನ್ನುವವನು ಅದೇ ರೀತಿ ಮಲ ಹಚ್ಚಿದ ಚಪ್ಪಲಿಯನ್ನು ತಂದು ತಿನ್ನು ತಿನ್ನು ಸೂಳೆಮಗನೆ'' ಎಂದು ಹೇಳಿ ಬಾಯಿಗೆ ಇಟ್ಟರು, ಈತ ಹೇಸಿಗೆ ವಾಸನೆಯನ್ನು ತಡೆಯಲಾರದೆ ಚಪ್ಪಲಿಯನ್ನು ಬಾಯಿಗೆ ಇಡುವುದನ್ನು ಪ್ರತಿಭಟಿಸಿದ ಎಂದು ವರದಿಯಾಗಿದೆ.

ಅಧ್ಯಕ್ಷರು.—ತಾವು ವಿವರಕ್ಕೆ ಹೋಗಬೇಡಿ

ಶ್ರೀ ಎಂ. ಎಸ್. ಕೃಷ್ಣನ್.—ಪತ್ರಿಕೆಗಳಲ್ಲಿ ಎಲ್ಲಾ ಬಂದಿದೆ. ನಾನು ವಿವರಕ್ಕೆ ಹೋಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ —ಒಂದು ಪತ್ರಿಕೆಯಲ್ಲಿ ಕ್ವಶ್ಚನ್ ಮಾರ್ಕ್ ಹಾಕಿದ್ದಾರೆ. ಈ ಬಗ್ಗೆ ನನಗೆ ಅವಕಾಶ ಮಾಡಿ ಕೊಟ್ಟರೆ ಸಾಯಂಕಾಲದ ವೇಳೆಗೆ ಉತ್ತರ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಪೂರ್ತಿಯಾಗಿ ಹೇಳುವುದಿಲ್ಲ, ಯಾವ ತರಹ ಪತ್ರಿಕೆಗಳಲ್ಲಿ ಬಂದಿ . ಇದು ಬಹಳ ಗಂಭೀರವಾದ ಸಮಸ್ಯೆ .....

ಅಧ್ಯಕ್ಷರು.—ನೀವು ಮೆರಿಟ್‌ಗೆ ಹೋಗಬೇಡಿ. ಅವಕಾಶ ಮಾಡಿಕೊಡಬೇಕೆಂದಷ್ಟೇ ಹೇಳಿ ಸಾಕು.

ಶ್ರೀ ಎಂ. ಎಸ್. ಕೃಷ್ಣನ್.—ಎರಡನೇ ಕಾರಣ ಬಂದಿರುವುದು ಲ್ಯಾಂಡ್ ರಿಫಾರಮ್ಸ್‌ನಲ್ಲಿ ಈ ಹರಿಜನ ಮತ್ತು ಗಿರಿಜನರಿಗೆ ತೊಂದರೆ ಕೊಡ ತ್ತಿರುವ ಬಗ್ಗೆ. ಇದು ದಿನೇ ದಿನೇ ಜಾಸ್ತಿಯಾಗುತ್ತಿದೆ. ಪೋಲೀಸಿನವರು ಸರಿಯಾಗಿ ಆಕ್ಟ್ ಮಾಡಿಲ್ಲ. ಇದರಿಂದ ನಮಗೇನು ತೋರುತ್ತದೆ ಎಂದರೆ, ಇದು ಸರ್ಕಾರದ ವಿಫಲತೆಯನ್ನು ಎತ್ತಿ ತೋರಿಸುತ್ತದೆ, ಆದ್ದರಿಂದ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೆ ಚರ್ಚೆ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಪತ್ರಿಕೆಗಳಲ್ಲಿ ಬಂದಿರುವ ವಿಷಯವೆಲ್ಲಾ ನಿಜವೆಂದು ಮಾನ್ಯ ಸದಸ್ಯರು ಭಾವಿಸಿಕೊಳ್ಳುವುದಾದರೆ ಅದು ಸರಿಯಲ್ಲ. ಮಂಧ್ಯಾಹ್ನ ಮಾನ್ಯ ಮುಖ್ಯಮಂತ್ರಿಗಳ ಉತ್ತರ ಮುಗಿದ ಕೂಡಲೇ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದು, ನಾನು ಉತ್ತರ ಕೊಡುವುದಕ್ಕೆ ಸಿದ್ಧವಾಗಿದ್ದೇನೆ.

ಅಧ್ಯಕ್ಷರು.—ಸಿ ಜನ ಮಾನ್ಯ ಸದಸ್ಯರು ತಂದಂಥ ನಿಲುವಳಿ ಸೂಚನೆಗೆ ಅನುಮತಿಯನ್ನು ನಾನು ನಿರಾಕರಿಸಿದ್ದೇನೆ. ನಿಯಮ ೬೮ರ ಪ್ರಕಾರ ಇದರ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಚರ್ಚೆಯನ್ನು ಇವತ್ತೇ ತೆಗೆದುಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಕೊಡುವುದಕ್ಕಿಂತ ಮುಂಚಿತವಾಗಿಯೇ ಇದನ್ನು ತೆಗೆದುಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆ

೧. ರಾಜ್ಯದ ವಿವಿಧ ಸರ್ಕಾರಿ ಶಾಲೆಗಳಲ್ಲಿ ನೂರಾರು ಶಿಕ್ಷಕರು ಸೇವೆಯಲ್ಲಿ ಖಾಯಂ ಆಗದೆ ತೊಂದರೆಗೊಳಗಾಗಿರುವುದು.

ಶ್ರೀ ಎಂ. ಎಸ್. ಕೃಷ್ಣನ್.—ರಾಜ್ಯದ ವಿವಿಧ ಸರ್ಕಾರಿ ಶಾಲೆಗಳಲ್ಲಿ ನೂರಾರು ಶಿಕ್ಷಕರು ಸೇವೆಯಲ್ಲಿ ಖಾಯಂ ಆಗದೆ ತೊಂದರೆಗೊಳಗಾಗಿರುವ ಬಗ್ಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಾನ್ಯ ಶಿಕ್ಷಣ ರಾಜ್ಯ ಸಚಿವರು).—ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ೭೯೭೧ ಶಿಕ್ಷಕರು ಈ ಪದವಿ ಪೂರ್ವ ಪ್ರೌಢಶಾಲೆ, ಮತ್ತು ಪ್ರಾಥಮಿಕ ಶಾಲೆಗಳನ್ನೊಳಗೊಡಂತೆ. ಗುತ್ತಿಗೆ ಆಧಾರದ ಮೇಲೆ ಸೇವೆಯಲ್ಲಿ ಮುಂದುವರಿಯುತ್ತಾ ಬಂದಿರುತ್ತಾರೆ. ಈ ರೀತಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳನ್ನು ಕಾನೂನಿನ ಚೌಕಟ್ಟಿನಲ್ಲಿ ಪರಿಶೀಲಿಸಿ

ಖಾಯಂಗೊಳಿಸುವುದಾಗಿ ಆಶ್ವಾಸನೆ ಕೊಟ್ಟಿರುವುದು ನಿಜ. ಈ ಸಮಸ್ಯೆಗೆ ಪರಿಹಾರ ಹುಡುಕಲು ಸರ್ಕಾರ ತನ್ನ ಪ್ರಯತ್ನ ಮಾಡುತ್ತಲಿದೆ. ಇವರನ್ನು ಖಾಯಂಗೊಳಿಸುವ ಬಗ್ಗೆ ಅನೇಕ ಕಾನೂನಿನ ತೊಡಕುಗಳು ಉಂಟಾಗಿವೆ. ಆದುದರಿಂದ ನಿರ್ದಿಷ್ಟ ತೀರ್ಮಾನವನ್ನು ತೆಗೆದುಕೊಳ್ಳುವುದ ಕಷ್ಟವಾಗುತ್ತಿದೆ. ಆದರೆ ಮಾನವೀಯತೆ ದೃಷ್ಟಿಯಿಂದ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಸೇವೆಯಲ್ಲಿ ಮುಂದುವರಿಸಲಾಗುತ್ತಿದೆ. ಸರ್ಕಾರದ ಪೂರ್ಣ ಸಹಾನುಭೂತಿ ಈ ವಿಷಯದ ಬಗ್ಗೆ ಇದೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಒಂದು ಸ್ಟಾಕ್ ಆನ್ಸರನ್ನು ಪ್ರತಿ ವರ್ಷ ಕೊಡುತ್ತಿದ್ದಾರೆ. ಇದರಿಂದ ಅವರಿಗೇನು ಪ್ರಯೋಜನವಾಗುವುದಿಲ್ಲ. ಅವರು ಸರಿಯಾದ ಉತ್ತರ ಕೊಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ನಿಮಗೆ ಯಾವ ತರಹ ಉತ್ತರ ಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ನಮಗೆ ಸ್ಪಷ್ಟವಾದ ಉತ್ತರ ಬೇಕು. ನಿಮ್ಮ ಹಾಗೆ ಅವರು ನಿಖರವಾಗಿ ಹೇಳುವುದಿಲ್ಲ. ನೀವು ಆಣೆಕಟ್ಟು ಕಟ್ಟುತ್ತೇನೆಂದರೆ ಕಟ್ಟಿಸುತ್ತೀರಿ ಇಲ್ಲದಿದ್ದರೆ ರಾಜೀನಾಮೆಯನ್ನಾ ಕೊಡುತ್ತೇನೆಂದು ಹೇಳುತ್ತೀರಿ. ನಿಮ್ಮಷ್ಟು ಧೈರ್ಯ ಅವರಿಗಿಲ್ಲವಲ್ಲ. ಸ್ವಾಮಿ, ಅವರು ಹಿಂದೆ ಸಹ ಆಶ್ವಾಸನೆಯನ್ನು ಕೊಟ್ಟಿದ್ದರು, ಆದರೆ ಕಾನೂನು ತೊಡಕುಗಳು ಇವೆಯೆಂದು ಈಗ ಹೇಳುತ್ತಿದ್ದಾರೆ. ಹಿಂದೆ ನಮ್ಮನ್ನೆಲ್ಲಾ ಕಳುಹಿಸಿ ಅವರಲ್ಲಿ ಮಾತನಾಡಿ ಬಂದಿದ್ದೇವೆ. ಆಗ ನೀವೇ ಸಲಹೆ ಸೂಚನೆಗಳನ್ನು ಕೊಡಿ ಎಂದು ಹೇಳಿದ್ದರು. ಆದ್ದರಿಂದ ದಯವಾಡಿ ನಿಖರವಾದ ಉತ್ತರ ಕೊಡಿ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ, ಆಶ್ವಾಸನೆಯನ್ನು ಮಂತ್ರಿಗಳಾದವರು ಕೊಡುತ್ತಾರೆ. ಆದರೆ ಆಡಳಿತಾತ್ಮಕ ದೃಷ್ಟಿಯಿಂದ ಕಾನೂನು ರೀತ್ಯ ಪರಿಶೀಲನೆ ಮಾಡಬೇಕಾಗುತ್ತದೆ ಪರಿಶೀಲನೆ ಮಾಡುವಾಗ ತೊಡಕುಗಳು ಕಂಡು ಬಂದಿದೆ. ಗುತ್ತಿಗೆ ಶಿಕ್ಷಕರನ್ನು ನೇಮಕ ಮಾಡುವಾಗ ಹಿಂದೆ ಯಾವ ರೋಸ್ಟರ್ ಪದ್ಧತಿ ಇತ್ತೋ ಆ ರೀತಿ ನೇಮಕ ಮಾಡಿದ್ದಾರೆ. ಆದರೆ ೧೯೮೬ರ ಡಿಸೆಂಬರ್ ತಿಂಗಳಲ್ಲಿ ಬಂದ ಹೊಸ ರೋಸ್ಟರ್ ಪದ್ಧತಿಯ ಪ್ರಕಾರ ನೇಮಕ ಮಾಡಬೇಕಾಗಿರುವುದರಿಂದ ಈ ದಿಶೆಯಲ್ಲಿ ಕಾನೂನು ಅಡ್ಡಿ ಬರುತ್ತಿದೆ. ಗುತ್ತಿಗೆ ಶಿಕ್ಷಕರನ್ನು ಕೆಲಸದಿಂದ ತೆಗೆದಿಲ್ಲ. ಅವರ ಸೇವೆಯನ್ನು ಮುಂದುವರಿಸುತ್ತಿದ್ದೇವೆ. ಒಟ್ಟಿನಲ್ಲಿ ಅವರನ್ನು ಕೆಲಸದಿಂದ ತೆಗೆಯುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಅವರನ್ನು ಕೆಲಸದಿಂದ ತೆಗೆಯುವುದಿಲ್ಲವೆಂದು ಈ ಹಿಂದೆಯೇ ಹೇಳಿದ್ದೀರಿ. ಕೆಲಸದಿಂದ ತೆಗೆಯುವುದಿಲ್ಲವೆಂದು ಸುಮ್ಮನೆ ೧೦ ವರ್ಷ ೨೦ ವರ್ಷ ಇಟ್ಟುಕೊಂಡರೆ ಅವರಿಗೆ ಬರಬೇಕಾದ ಸೇವಾ ಸೌಲಭ್ಯಗಳು ಬರುವುದಿಲ್ಲ. ಸೇವಾ ನಿಯಮಗಳಿಗೆ ಅವರು ಒಳಪಡುವುದಿಲ್ಲ. ವಯಸ್ಸು ಹೆಚ್ಚಿಗೆ ಆದ ಮೇಲೆ ಅವರಿಗೆ ಬೇರೆ ಕಡೆ ಕೆಲಸ ಸಿಗುವುದಿಲ್ಲ. ಈ ರೀತಿ ಹಲವಾರು ಸಮಸ್ಯೆಗಳು ಉದ್ಭವವಾಗುತ್ತದೆ. ಕಳೆದ ಬಾರಿಯೇ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯತೆ ಇದೆ. ಇನ್ನು ಸ್ವಲ್ಪ ದಿನಗಳಲ್ಲಿಯೇ ಬಗೆಹರಿಸುತ್ತೇವೆಂದು ಆಶ್ವಾಸನೆಯನ್ನೂ ಸಹ ಕೊಡಲಾಗಿತ್ತು. ನಾನು ಕೇಳುವುದೇನೆಂದರೆ, ಈ ಸಮಸ್ಯೆಯನ್ನು ಇನ್ನೆಷ್ಟು ದಿನಗಳಲ್ಲಿ ಬಗೆಹರಿಸಿ ಅವರುಗಳನ್ನು ಖಾಯಂ ಮಾಡಲಾಗುತ್ತದೆಂದು ಸ್ಪಷ್ಟವಾಗಿ ಮತ್ತು ನಿಖರವಾಗಿ ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಬಿ ಸೋಮಶೇಖರ್.— ಮಾನ್ಯ ಅಧ್ಯಕ್ಷರೇ, ಈಗಿರುವ ಸಮಸ್ಯೆ ಏನೆಂದರೆ, ಇನ್ನು ಮುಂದೆ ಯಾರನ್ನೇ ಖಾಯಂ ಮಾಡಲಿ, ಖಾಯಂ ಮಾಡುವಾಗ ಹೊಸದಾಗಿ ರಚನೆ ಮಾಡಿರುವ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಮಾಡಬೇಕೆಂದು ಸರ್ಕಾರದ ಆದೇಶ ಇದೆ. ಈ ಆದೇಶದ ಪ್ರಕಾರ ಇವರುಗಳನ್ನು ನೇರವಾಗಿ ರೆಗ್ಯುಲರೈಸ್ ಮಾಡುವುದಕ್ಕೆ ಬರುವುದಿಲ್ಲ, ಇವರುಗಳನ್ನು ಖಂಡಿತವಾಗಿ ನಾವು ಕೆಲಸದಿಂದ ತೆಗೆಯುವುದಿಲ್ಲ. ಸೇವಾ ನಿಯಮಗಳಿಂದ ಅವರು ವಂಚಿತ ರಾಗುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಪರ್ಮನೆಂಟ್ ಆಗಿ ನೇಮಕಗೊಂಡಿದ್ದರೆ ಮಾತ್ರ ಸೇವಾ ನಿಯಮಗಳನ್ನು ಪರಿಪಾಲನೆ ಮಾಡುವುದಕ್ಕೆ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಇವರುಗಳನ್ನು ಇನ್ನೆಷ್ಟು ದಿನ ಇದೇ ರೀತಿ ಮುಂದುವರಿಸಿಕೊಂಡು ಬರುತ್ತೀರಿ ? ಇದೇ ರೀತಿ ಖಾಯಂ ಮಾಡದೇ ಮುಂದುವರಿಸಿಕೊಂಡು ಹೋಗುತ್ತಿದ್ದರೆ ಅವರುಗಳಿಗೆ ಸೇವಾ ನಿಯಮಗಳು ಸಿಗುವುದು ಯಾವಾಗ ? ಸರ್ಕಾರಿ ನೌಕರರಿಗೆ ಯಾವ ಸೇವಾ ಸೌಲಭ್ಯಗಳು ಸಿಗಬೇಕೋ ಅವುಗಳನ್ನು ಇವರಿಗೂ ಬೇಗ ಸಿಗುವಂತೆ ಮಾಡಬೇಕು. ಈ ವಿಷಯವನ್ನು ಇನ್ನೆಷ್ಟು ದಿನಗಳಲ್ಲಿ ಇತ್ಯರ್ಥ ಮಾಡುತ್ತೀರಿ ? ಇಷ್ಟು ದಿನದೊಳಗೆ ಖಾಯಂ ಮಾಡುತ್ತೇವೆಂದು ಒಂದು ಗಡುವು ಇಡಿ. ಇಲ್ಲದಿದ್ದರೆ ಏನು ಪ್ರಯೋಜನ ? ನೀವು ಯುವಕ ಮಂತ್ರಿಗಳಾಗಿದ್ದೀರಿ. ಬಹಳ ಚೆನ್ನಾಗಿ ತಲೆ ಓಡಿಸುತ್ತೀರಿ. ಆದ್ದರಿಂದ ಇದರ ಬಗ್ಗೆ ಸಹ ಸ್ವಲ್ಪ ತಲೆ ಓಡಿಸಿ ಸಮಸ್ಯೆಯನ್ನು ಬೇಗ ಇತ್ಯರ್ಥ ಮಾಡಿ.

ಶ್ರೀ ಬಿ. ಸೋಮಶೇಖರ್.— ಆದಷ್ಟು ಶೀಘ್ರವಾಗಿ ಇದನ್ನು ಪರಿಶೀಲಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಆದಷ್ಟು ಶೀಘ್ರ ಎಂದರೆ, ಇನ್ನೆಷ್ಟು ದಿನ ಬೇಕಾಗುತ್ತದೆಂದು ಹೇಳಬೇಕು. ಆದಷ್ಟು ಶೀಘ್ರ ಎಂದರೆ ಅರ್ಥ ಏನು ?

ಶ್ರೀ ಬಿ. ಸೋಮಶೇಖರ್.— ಮಾನ್ಯ ಅಧ್ಯಕ್ಷರೇ, ಅವರುಗಳ ಬಗ್ಗೆ ಸಹಾನುಭೂತಿಯಿಂದ ಆದಷ್ಟು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ.— ಮಾನ್ಯ ಅಧ್ಯಕ್ಷರೇ, ಒಂದು ವಿಷಯ.

ಅಧ್ಯಕ್ಷರು.— ಒಂದೂ ಬರುವುದಿಲ್ಲ, ಅರ್ಧಾನೂ ಬರುವುದಿಲ್ಲ, ಕಾಲೂ ಬರುವುದಿಲ್ಲ. ತಾವು ಕೂಡ್ರಿ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ — ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು.— ನಿಮಗೆ ಕಾಯಿದೆ ಏನೂ ಗೊತ್ತಿಲ್ಲ ನಿಮಗೆ ಅವಕಾಶ ಇಲ್ಲ. ತಾವು ಕೂಡ್ರಿ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ.— ಇದರಲ್ಲಿ ಸಾರ್ವಜನಿಕರ ಹಿತ ಇದೆ.

ಅಧ್ಯಕ್ಷರು.— ತಾವು ಕೂಡ್ರಿ, ಮಾನ್ಯ ಯಡಿಯೂರಪ್ಪನವರೇ, ತಾವು ಮಂತ್ರಿಗಳ ಗಮನ ಸೆಳೆಯಿರಿ.

ರಾಜ್ಯದಲ್ಲಿ ಹಿಂದುಳಿದ ಜನಾಂಗದ ವಿದ್ಯಾರ್ಥಿನಿಲಯಗಳ ಸ್ಥಿತಿಗತಿ ಹದಗೆಟ್ಟಿರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರುವ ಹಿಂದುಳಿದ ಜನಾಂಗದ ವಿದ್ಯಾರ್ಥಿ ನಿಲಯಗಳ ಸ್ಥಿತಿಗತಿ ಹದಗೆಟ್ಟಿರುವ ವಿಷಯದ ಬಗ್ಗೆ ಸಮಾಜ ಕಲ್ಯಾಣ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಯಪ್ಪ (ಸಮಾಜ ಕಲ್ಯಾಣ ಸಚಿವರು).— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರುವ ಹಿಂದುಳಿದ ಜನಾಂಗದ ವಿದ್ಯಾರ್ಥಿನಿಲಯಗಳು ತುಂಬಾ ಹದಗೆಟ್ಟಿವೆ ಎಂಬ ಮಾತು ಸರಿಯಲ್ಲ. ಕಳೆದ ಎರಡು ವರ್ಷಗಳಿಂದ ಹಿಂದುಳಿದ ಜನಾಂಗದ ವಿದ್ಯಾರ್ಥಿನಿಲಯಗಳನ್ನು ಅಭಿವೃದ್ಧಿಗೊಳಿಸಲು ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗಿದೆ. ಹಿಂದುಳಿದ ಜನಾಂಗದ ವಿದ್ಯಾರ್ಥಿನಿಲಯಗಳ ಬಗ್ಗೆ ಒಂದು ವರದಿಯನ್ನು ಸಲ್ಲಿಸುವುದಕ್ಕೆ ಮಾನ್ಯ ಗುರುಪ್ರಸಾದ್‌ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಮಾಡಲಾಗಿತ್ತು. ಗುರುಪ್ರಸಾದ್ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯಲ್ಲಿ ತಿಳಿಸಿರುವಂತೆ ಹಾಸ್ಟೆಲ್‌ಗಳನ್ನು ಅಭಿವೃದ್ಧಿಗೊಳಿಸಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರುವಂಥ ಎಸ್.ಸಿ. ಮತ್ತು ಎಸ್.ಟಿ. ಹಾಸ್ಟೆಲ್‌ಗಳ ಸ್ಥಿತಿಯನ್ನು ಸುಧಾರಿಸಲಾಗಿದೆ. ನಾನು ಹೇಳುವಂಥ ವಿಚಿತ್ರವಾದ ಪರಿಸ್ಥಿತಿ ಇಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಗುರುಪ್ರಸಾದ್ ಸಮಿತಿಯವರು ಮಧ್ಯಂತರ ವರದಿಯನ್ನು ಕೊಟ್ಟಿದ್ದಾರೆ. ಈ ವರದಿಯಂತೆ ಕೆಲಸಗಳನ್ನು ಅನುಷ್ಠಾನಕ್ಕೆ ಈ ಕೂಡಲೇ ಜಾರಿಗೆ ತರಬೇಕೆಂದು ಮಾನ್ಯ ಸಮಾಜ ಕಲ್ಯಾಣ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಜನತಾ ಸರ್ಕಾರ ಬಂದ ಮೇಲೆ ಈ ದಿಕ್ಕಿನಲ್ಲಿ ಮಾಡಿರುವಂಥ ಪ್ರಯತ್ನ ಎಂದರೆ, ಎಸ್.ಸಿ ಮತ್ತು